

‘ಗುಟುಕು ವಿಸ್ಕಿಸೇವಿಸಿ ನಿಮ್ಮ ಹೃದಯ ಉಳಿಸಿ’ ಎಂದು ಪ್ರಕಟವಾಗಿದ್ದ ತುಣುಕುಸುದ್ದಿಯನ್ನು ಮುತುವರ್ಜಿಯಿಂದ ಹರಿದುಕೊಂಡು ಬಂದು ಎದುರಿಗಿಟ್ಟೆ. ಇಂತಹ ಸತತ ಯತ್ನಗಳಿಂದ ಪಾನವು ಕಳ್ಳತನ ಅತ್ಯಾಚಾರದಂತಹ ಅಪರಾಧವಲ್ಲ ಎಂಬ ಕಿಂಚಿತ್ ಜ್ಞಾನೋದಯ ಆಕೆಗಾಯಿತು. ಆದರೂ ಪಾನಿಗಳ ಬಗ್ಗೆ ಸಂಶಯ ಹೋಗಿಲ್ಲ. ಆದರೆ ಅಪರೂಪಕ್ಕೆ ಪಾರ್ಟಿಯಾದರೆ ಸಿಡಿಸಿಡಿಸುವುದಿಲ್ಲ. ಮೈತುಂಬ ಕಣ್ಣಾಗಿ ಕುಳಿತು ನಿಂಬೆರಸ ಕುಡಿಯುತ್ತ, ಹುಬ್ಬಿನಲ್ಲೇ ನನ್ನನ್ನು ನಿಯಂತ್ರಿಸುತ್ತ, ಪತಿ ಅಧಃಪತನವಾಗದಂತೆ ರಕ್ಷಿಸಿ ಮನೆಗೊಯ್ಯುವಳು.

ನನ್ನಂತೆಯೇ, ಮಡದಿಗೆ ಪೂರ್ವಭಾವಿಯಾದ ತಿಳಿವನ್ನು ಧಾರೆಯೆರೆಯದೆ ಪಾನಸಾಹಸ ಮಾಡಿದ ಗೆಳೆಯ ಕಷ್ಟಕ್ಕೆ ಸಿಲುಕಿದ ಕತೆಯನ್ನು ಇಲ್ಲೇ ಉಲ್ಲೇಖಿಸಬೇಕು. ಬಾನುವಿನಂತೆ ಆತನ ಪತ್ನಿಯೂ ಸಂಪ್ರದಾಯಸ್ಥ ಕುಟುಂಬದಲ್ಲಿ ಬೆಳೆದ ಗಾಮೀಣ ಮುಗ್ಧೆ; ಜತೆಗೆ ಖಾಸಾ ಅಕ್ಕನ ಮಗಳು. ಅವನ ಲಗ್ನದ ಪ್ರಥಮ ವರ್ಷಾಚರಣೆಗೆ ಸಪತ್ನೀಕರಾಗಿ ಗೋವಾಕ್ಕೆ ಹೋಗಿದ್ದೆವು. ಆಕೆ ಬೀಚುಗಳಲ್ಲಿದ್ದ ಅರೆಬೆತ್ತಲ ಜೋಡಿಗಳನ್ನು ನೋಡಿಯೇ ಅರ್ಧ ಕಸಿವಿಸಿಗೊಂಡಿದ್ದಳು. ಡಿನ್ನರಿಗೆ ಕುಳಿತಾಗ ಹುರಿದ ಮೀನಿನ ಜತೆ ಪುರುಷರಿಗೆ ಶುಭ್ರಜಲದಂತಿರುವ ಕಾಜುಫೆನ್ನಿ, ಸ್ತ್ರೀಸಂಕುಲಕ್ಕೆ ನಿಂಬೆಸೋಡಾ ಮಾಂಜಾ ಕೋಲಾ ಆಗಮಿಸಿದವು. ಗೆಳೆಯನು ಆಕೆಯ ನಂಬಿಕೆಗೆ ದ್ರೋಹಿಸುವಂತೆ ಫೆನ್ನಿತುಂಬಿದ ಬಟ್ಟಲ ನಡುವಿಗೆ ಕೈಹಾಕಿದನು. ಆಕೆ ಗಾಬರಿಯಿಂದ ಕಣ್ಣರಳಿಸಿದಳು. ಆತ ಪತ್ನಿಯ ಕಣ್‌ಬಾಣಗಳ ಹೊಡೆತ ತಾಳಲಾಗದೆ ಸಹಾಯಕ್ಕಾಗಿ ಆರ್ತವದನದಿಂದ ನಮ್ಮತ್ತ ನೋಡಿದ. ದುರದೃಷ್ಟಕ್ಕೆ ಆ ಘಾತಕ ಗಳಿಗೆಯಲ್ಲಿ ಅವನಿಗೆ ಮುಖಾಮುಖಿಯಾಗಿದ್ದು ‘ಹೆಂಡತಿಗೆ ಹೆದರುವವನು’ ಎಂದು ಛೇಡಿಸುತ್ತಿದ್ದ ಸಹೋದ್ಯೋಗಿಯ ಚುಚ್ಚುನಗೆ. ಆ ನಗೆಯಲ್ಲಿದ್ದ ವ್ಯಂಗ್ಯವು ಈಟಿಯಂತೆ ತಿವಿದು ಗೆಳೆಯನ ಪೌರುಷವನ್ನು ಜಾಗೃತಗೊಳಿಸಿತು. ಆತ ಬಟ್ಟಲನೆತ್ತಿ ಧಡಧಡ ಸುರಕೊಂಡನು. ಆಕೆ ತನ್ನೆರಡೂ ಬೊಗಸೆಗಳಿಂದ ಮುಖ ಮುಚ್ಚಿಕೊಂಡು ‘ಅಮ್ಮಾ’ ಎಂದು ಚೀತ್ಕರಿಸಿದರು. ದಡಕ್ಕಪ್ಪಳಿಸುವ